ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿಂಧನೂರು.

ದಿನಾಂಕ 22-02-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಜನಾರ್ಧನ ಶೆಟ್ಟಿ |
| ತಂದೆಯ ಹೆಸರು | ಸುಬ್ರಮಣ್ಯಂ ಶೆಟ್ಟಿ |
| ವಯಸ್ಸು | 48 |
| ಉದ್ಯೋಗ | ಭೂ ಮಾಪಕರು |
| ವಾಸ ಸ್ಥಳ | ಗಂಗಾವತಿ |

ಮುಖ್ಯ ವಿಚಾರಣೆ : ಶ್ರೀ. ಜಿ.ವಿ.ಹೆಚ್. (ಕೆ.ಎ.ಜಿ. ವಕೀಲರ ಪರವಾಗಿ) ವಕೀಲರಿಂದ

ನಾನು 2013 ರಿಂದ 2021 ರವರೆಗೆ ಸಿಂಧನೂರು ತಾಲೂಕಾ ಕಛೇರಿಯಲ್ಲಿ ತಾಲೂಕಾ ಭೂ ಮಾಪಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ಈಗ ಗಂಗಾವತಿ ತಾಲೂಕಾ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಾನು ವಿ. ರಂಜಿತ್ ಕಿರಣ್ ಎಂಬುವವರು 2016 ರಲ್ಲಿ ನೀಡಿದ ಭೂ ಮಾಪನ ಅರ್ಜಿ ಮೇರೆಗೆ ಸರ್ವೆ ನಂ. 86 ಹಿಸ್ಸಾ ನಂ. 2 ಮತ್ತು 86 ಹಿಸ್ಸಾ ನಂ. 1 ಕೆಂಗಲ್ ಗ್ರಾಮದ ಜಮೀನುಗಳನ್ನು ದಿ: 30/05/2017 ರಂದು ಅಳತೆ ಮಾಡಿ ಹದ್ದುಬಸ್ತು ನಕಾಶೆ ತಯಾರಿಸಿರುತ್ತೇನೆ. ನಾನು ಅಳತೆ ಮಾಡುವ ಮೊದಲು ಸದರಿ 86/*/1 ಮತ್ತು 86/*/2 ಜಮೀನುಗಳ ಚೆಕ್‌ಬಂದಿಯಲ್ಲಿ ಬರುವ ಎಲ್ಲಾ ಮಾಲೀಕರಿಗೆ ನೋಟೀಸ್‌ಗಳನ್ನು ನೀಡಿದ್ದೆ. ಸರ್ವೆ ಮಾಡಿದಾಗ ಜಮೀನು ಸರ್ವೆ ನಂ. 86/*/1 ರಲ್ಲಿ ಕೆಂಗಲ್ ಗ್ರಾಮದ 12 ಗುಂಟೆ ಜಮೀನನ್ನು ಪಶ್ಚಿಮದ ಕಡೆಗೆ ಸರ್ವೆ ನಂ. 85 ನ ಜಮೀನಿನ ಹಿಡುವಳಿದಾರರು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ ಮತ್ತು ಸರ್ವೆ ನಂ. 86/*/2 ಕೆಂಗಲ್ ಗ್ರಾಮದ ಜಮೀನನ್ನು ಅಳತೆ ಮಾಡಲಾಗಿ 7 ಗುಂಟೆ ಜಮೀನನ್ನು ಪಶ್ಚಿಮ ಭಾಗಕ್ಕೆ

ಸರ್ವೆ ನಂ. 85 ರ ಹಿಡುವಳಿದಾರರು ಒತ್ತುವರಿ ಮಾಡಿರುವುದು ಕಂಡುಬಂದಿರುತ್ತದೆ. ಈ ಕುರಿತು ನಾನು ಹದ್ದುಬಸ್ತು ನಕಾಶೆ ತಯಾರಿಸಿರುತ್ತೇನೆ ಮತ್ತು ಕಛೇರಿಗೆ ವರದಿ ಮಾಡಿರುತ್ತೇನೆ.

ಈಗ ನಾನು ನೋಡುತ್ತಿರುವ ದಾಖಲೆ ವಿ. ರಂಜಿತ್ ಕುಮಾರ ಇವರ ಅರ್ಜಿಯ ಮೇರೆಗೆ ಸರ್ವೆ ನಂ. 86/*/2 ರ ಕೆಂಗಲ್ ಗ್ರಾಮದ ಜಮೀನಿನ ಅಳತೆ ಕುರಿತು ಚೆಕ್‌ಬಂದಿಯಲ್ಲಿರುವ ಹಿಡುವಳಿದಾರರಿಗೆ ನೀಡಿರುವ ನೋಟೀಸಿನ ಪ್ರತಿಯಾಗಿರುತ್ತದೆ. ಅದನ್ನು ಈಗಾಗಲೇ ನಿ.ಪಿ. 10 ಎಂದು ಗುರುತಿಸಲಾಗಿದೆ.

ಈಗ ನಾನು ನೋಡುತ್ತಿರುವ ದಾಖಲೆ ವಿ. ರಂಜಿತ್ ಕುಮಾರ ಇವರ ಅರ್ಜಿಯ ಮೇರೆಗೆ ಸರ್ವೆ ನಂ. 86/*/1 ರ ಕೆಂಗಲ್ ಗ್ರಾಮದ ಜಮೀನಿನ ಅಳತೆ ಕುರಿತು ಚೆಕ್‌ಬಂದಿಯಲ್ಲಿರುವ ಹಿಡುವಳಿದಾರರಿಗೆ ನೀಡಿರುವ ನೋಟೀಸಿನ ಪ್ರತಿಯಾಗಿರುತ್ತದೆ. ಅದನ್ನು ಈಗಾಗಲೇ ನಿ.ಪಿ. 11 ಎಂದು ಗುರುತಿಸಲಾಗಿದೆ.

ಈಗ ನಾನು ನೋಡುತ್ತಿರುವ ದಾಖಲೆ ಸದರಿ ಸರ್ವೆ ನಂ. 86/*/1 ರ ಅಳತೆ ನಿರ್ವಹಿಸಿ ಹಾಜರಿದ್ದ ಜಮೀನುಗಳ ಹಿಡುವಳಿದಾರರ ಸಹಿ ಪಡೆದು ತಯಾರಿಸಿದ ಪಂಚನಾಮೆ ಆಗಿರುತ್ತದೆ. ಅದನ್ನು ಈಗಾಗಲೇ ನಿ.ಪಿ. 12 ಎಂದು ಗುರುತಿಸಲಾಗಿದೆ.

ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಸದರಿ ಸರ್ವೆ ನಂ. 86/*/2 ರ ಅಳತೆ ನಿರ್ವಹಿಸಿ ಹಾಜರಿದ್ದ ಜಮೀನುಗಳ ಹಿಡುವಳಿದಾರರ ಸಹಿ ಪಡೆದು ತಯಾರಿಸಿದ ಪಂಚನಾಮೆ ಆಗಿರುತ್ತದೆ. ಅದನ್ನು ಈಗಾಗಲೇ ನಿ.ಪಿ. 13 ಎಂದು ಗುರುತಿಸಲಾಗಿದೆ.

ಈಗ ನಾನು ನೋಡುತ್ತಿರುವ 2 ದಾಖಲೆಗಳು ನಾನು ತಯಾರಿಸಿದ ಸರ್ವೆ ನಂ. 86/*/1 ಮತ್ತು 86/*/2 ರ ಹದ್ದುಬಸ್ತು ನಕಾಶೆಗಳಾಗಿರುತ್ತವೆ. ಅವುಗಳಲ್ಲಿ ಒತ್ತುವರಿ ತೋರಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ. 14 ಮತ್ತು 15 ಎಂದು ಈಗಾಗಲೇ ಗುರುತಿಸಲಾಗಿದೆ.

<u>ಪಾಟೀ ಸವಾಲು : ಶ್ರೀ. ಹೆಚ್.ಎಸ್.ಎ. ವಕೀಲರಿಂದ</u>

ಈ ಹಂತದಲ್ಲಿ ಹೆಚ್.ಎಸ್.ಎ. ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ರೂ. 500.00 ಖರ್ಚಿನೊಂದಿಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಿಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು, ಸಿಂಧನೂರು.

ದಿನಾಂಕ 22-02-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಶ್ರೀ. ಜಿ.ವಿ.ಹೆಚ್. (ಕೆ.ಎ.ಜಿ. ವಕೀಲರ ಪರವಾಗಿ) ವಕೀಲರಿಂದ

ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದ ಅಂಶಗಳು ಸತ್ಯವಾಗಿರುತ್ತವೆ. ಪ್ರಮಾಣೀಕರಿಸಿದ್ದೇನೆ. ಅದರಲ್ಲಿರುವ ಸಹಿ ನನ್ನದೇ.

ಪಾಟೀ ಸವಾಲು : ಶ್ರೀ. ವಕೀಲರಿಂದ

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ಅನುಮತಿಸಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು, ಸಿಂಧನೂರು.